**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿ.ಸಿ. ನಂಬರಃ 2408/2024**

**ಡಿ.ಡಬ್ಲ್ಯೂಃ 01**

ಸಾಕ್ಷಿದಾರರ ಹೆಸರು : ಫಜಲುಲ್ಲಾ ಮಾಣಿ

ತಂದೆಯ ಹೆಸರು : ಸಾಹುಲ್ ಹಮೀದ್ ಮಾಣಿ

ವಯಸ್ಸು : 62 ವರ್ಷ

ಉದ್ಯೋಗ : ಬಟ್ಟೆ ಅಂಗಡಿಯಲ್ಲಿ ಕೆಲಸ

ವಾಸ್ತವ್ಯ : ಮುರ್ಡೇಶ್ವರ, ಭಟ್ಕಳ ತಾಲೂಕು

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 10-03-2026**

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ ಶ್ರೀ ವಿ.ಎ.ಎ. ವಕೀಲರಿಂದ,**

ನಾನು 2017 ನೇ ಇಸವಿಯಲ್ಲಿ ಫಿರ್ಯಾದುದಾರರ ಸೊಸೈಟಿಯಲ್ಲಿ ರೂ.5,00,000/- (ಐದು ಲಕ್ಷ ರೂಪಾಯಿ) ಸಾಲ ಮಾಡಿರುತ್ತೇನೆ. ಸದ್ರಿ ಸಾಲವನ್ನು 2019ನೇ ಇಸವಿಯಲ್ಲಿ ನವೀಕರಣ ಮಾಡಿರುತ್ತೇನೆ. 2017ನೇ ಇಸವಿಯಲ್ಲಿ ಸಾಲ ಪಡೆಯುವಾಗ ಎರಡು ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ. ಆಗ ಫಿರ್ಯಾದುದಾರರ ಸೊಸೈಟಿಯವರು ಚೆಕ್ಕು ನೀಡಿದರೆ ಮಾತ್ರ ಸಾಲ ನೀಡುತ್ತೇವೆ ಎಂದು ಹೇಳಿರುತ್ತಾರೆ. 2019ನೇ ಇಸವಿಯಲ್ಲಿ ಸುಮಾರು ಎರಡರಿಂದ ಮೂರು ಲಕ್ಷ ರೂಪಾಯಿ ಬಡ್ಡಿಯನ್ನು ಪಾವತಿಸಿರುತ್ತೇನೆ. ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸುವಾಗ ಫಿರ್ಯಾದುದಾರರ ಸೊಸೈಟಿಯವರು ನನಗೆ ಹೇಳಿರುವುದಿಲ್ಲ. ನನಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆ ಓದಲು, ಬರೆಯಲು ಬರುವುದಿಲ್ಲ. ಈ ಮೇಲೆ ಹೇಳಿದ ಎರಡೂ ಸಾಲಗಳ ದಾಖಲಾತಿಗಳ ಮೇಲೆ ನನ್ನ ಸಹಿ ಮಾತ್ರ ಪಡೆದಿರುತ್ತಾರೆ. ಅದನ್ನು ನಾನು ತುಂಬಿರುವುದಿಲ್ಲ. ಸುಮಾರು ಮೂರು ವರ್ಷಗಳ ಹಿಂದೆ ಫಿರ್ಯಾದುದಾರರ ಸೊಸೈಟಿಯವರಿಗೆ ನನ್ನ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಬೇಡಿ, ನನ್ನ ಜಾಗವನ್ನು ಮಾರಾಟ ಮಾಡಿ ಸಾಲದ ಹಣ ಪಾವತಿಸುತ್ತೇನೆ ಎಂದು ಹೇಳಿದ್ದೆನು. ದಿನಾಂಕಃ 08-08-2024 ರಂದು ಫಿರ್ಯಾದುದಾರರ ಸೊಸೈಟಿಯವರೇ ಚೆಕ್ಕಿನಲ್ಲಿ ದಿನಾಂಕ ಮತ್ತು ಮೊತ್ತ ಬರೆದು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ಹಾಗೆ ಅಂಚೆ ಇಲಾಖೆಯಿಂದ ನೋಟೀಸಿನ ಬಗ್ಗೆ ಮಾಹಿತಿ ಬಂದಿರುವುದಿಲ್ಲ. ಆದ್ದರಿಂದ ಈ ಪ್ರಕರಣದಿಂದ ನನ್ನ ಮುಕ್ತಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು ಮಾಡಲು ಫಿರ್ಯಾದುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**